# <u>ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ.</u>

<u>ಸಿಸಿ**: 1304/2023**</u>

**ಪಿರ್ಯಾದುದಾರರು** : ಶ್ರೀ ನಾರಾಯಣಸ್ವಾಮಿ,
ಬಿನ್ ಲೇಟ್ ದೊಡ್ಡತಾನಯ್ಯ,
65 ವರ್ಷ,
ವಾಸಃ ನಂ.**2108/384,**
**9** ನೇ ಕ್ರಾಸ್,
ವಿಶ್ವಪ್ರೇಮಿ ಚತ್ರದ ಪಕ್ಕ,
ಕುವೆಂಪುನಗರ, ಬಿ.ಎಂ. ರೋಡ್,
ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆ.

-ವಿರುದ್ಧ-

**ಆರೋಪಿ** : ಸಿ.ಪಿ.ರಿತೇಶ್,
ಬಿನ್ ಲೇಟ್ ಎಂ.ಸಿ. ಪುಟ್ಟಮಾದಯ್ಯ,
3 ನೇ ಕ್ರಾಸ್ ಡೌನ್,
ವಾಸ ಃ ಎಸ್.ಎಂ.ಹಳ್ಳಿ ಗ್ರಾಮ,
ಚಾನಲ್ ರೋಡ್,
ಮಂಜುನಾಥ ಬಡಾವಣೆ,
ಚನ್ನಪಟ್ಟಣ ಟೌನ್,
ರಾಮನಗರ ಜಿಲ್ಲೆ.

## <u>ಆಪಾದನೆ</u>

ಆರೋಪಿಯು ಪಿರ್ಯಾದುದಾರರಿಗೆ ಮನೆ ಬ್ರೋಕರ್ ಚಂದುರವರ ಮುಖಾಂತರ ಪರಿಚಯವಾಗಿ ಆರೋಪಿಯು ಪಿರ್ಯಾದುದಾರರಿಗೆ ಅವರ ಮನೆಯನ್ನು ಕೊಡುವುದಾಗಿ ಹೇಳಿ ಪಿರ್ಯಾದುದಾರರನ್ನು ಬೋಕರ್ ಚಂದುರವರು ದಿನಾಂಕಃ**05.11.2022** ರಂದು ಆರೋಪಿಯ ಬಳಿ ಕರೆದುಕೊಂಡು ಹೋಗಿ ಮಾತು ಕತೆ ಮಾಡಿ ಆರೋಪಿಯು ಅವರ ಮನೆಯನ್ನು ಪಿರ್ಯಾದುದಾರರಿಗೆ **6** ಲಕ್ಷ ರೂಪಾಯಿಗಳಿಗೆ **3** ವರ್ಷಗಳ ಅವಧಿಗೆ ಬೋಗ್ಯಕ್ಕೆ ಕೊಡುವುದಾಗಿ ಒಪ್ಪಿ, ಪಿರ್ಯಾದುದಾರರಿಗೆ ವಾಹನ ನಿಲುಗಡೆ ಮಾಡಲು ಪ್ರತ್ಯೇಕವಾದ ಸ್ಥಳವನ್ನು ಕೊಡುವುದಾಗಿ ಒಪ್ಪಿ, ಅದೇ ದಿನ ಆರೋಪಿಯು ಮುಂಗಡ ಹಣವಾಗಿ ರೂ.**50,000/-** ಹಣಕ್ಕೆ ಪಿರ್ಯಾದುದಾರರು ಅವರ ಉಳಿತಾಯ ಖಾತ ಇರುವ ಕೆನರಾ ಬ್ಯಾಂಕ್, ದೇವನಹಳ್ಳಿ ಬ್ರಾಂಚ್‌ನ ಚೆಕ್ ಸಂಖ್ಯೆ:**341408** ರ ಚೆಕ್ಕನ್ನು ಪಿರ್ಯಾದುದಾರರು ಆರೋಪಿಗೆ ಕೊಟ್ಟಿದ್ದು, ಸದರಿ ಚೆಕ್ಕನ್ನು ಆರೋಪಿಯು ಪಿರ್ಯಾದುದಾರರ ಉಳಿತಾಯ ಖಾತೆಗೆ ಹಾಜರುಪಡಿಸಿ ಪಿರ್ಯಾದುದಾರರ ಖಾತೆಯಿಂದ

ದಿನಾಂಕಃ**07.11.2022** ರಂದು ರೂ.**50,000/-**ಗಳನ್ನು ಪಡೆದುಕೊಂಡಿರುತ್ತಾರೆ. ನಂತರ ಆರೋಪಿಯು ಅವರು ಒಪ್ಪಿರುವ ಹಾಗೆ ನಿಗದಿತ ಅವಧಿಯಲ್ಲಿ ಮನೆಯನ್ನು ವಾಸಿಸಲು ಯೋಗ್ಯವಾದ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಡದೇ ಇದ್ದುದರಿಂದ, ಮೊದಲು ಒಪ್ಪಿರುವ ಹಾಗೆ ವಾಹನ ನಿಲುಗಡೆಗೆ ಜಾಗದ ವ್ಯವಸ್ಥೆ ಮಾಡಿಕೊಡಬೇಕೆಂದು ಪಿರ್ಯಾದುದಾರರು ಆರೋಪಿಗೆ ಕೇಳಿಕೊಂಡಿದ್ದು, ಅದಕ್ಕೆ ಆರೋಪಿಯು ಪಿರ್ಯಾದುದಾರರಿಗೆ ನೀವು ಬೇರೆ ಕಡೆ ಮನೆ ನೋಡಿಕೊಳ್ಳಿ ಎಂದು ಹೇಳಿರುತ್ತಾರೆ. ಆಗ ಪಿರ್ಯಾದುದಾರರು ಆರೋಪಿಗೆ ನೀಡಿದ ಅಡ್ವಾನ್ಸ್ ಹಣ ರೂ.**50,000/-**ಗಳನ್ನು ವಾಪಸ್ ಕೊಡುವಂತೆ ಕೇಳಿದ್ದು ಆರೋಪಿಯು ಹಣದ ಮರುಪಾವತಿಗಾಗಿ ಚನ್ನಪಟ್ಟಣ ಶಾಖೆಯ ಆಕ್ಸಿಸ್ ಬ್ಯಾಂಕ್ ನ ಚೆಕ್ ಸಂಖ್ಯೆಃ **035203** ಇದರ ದಿನಾಂಕ **02.01.2023** ಎಂದು ನಮೂದು ಮಾಡಿ ಸದರಿ ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ಪಿರ್ಯಾದುದಾರರಿಗೆ ನೀಡಿ ಹಣ ತೆಗದುಕೊಳ್ಳುವಂತೆ ಹೇಳಿರುತ್ತೀರಿ, ಅದರಂತೆ ಪಿರ್ಯಾದುದಾರರು ನೀವು ಕೊಟ್ಟ ಚೆಕ್ ನ್ನು ದಿಃ**02.01.2023** ರಂದು ಪಿರ್ಯಾದುದಾರರು ಖಾತೆ ಹೊಂದಿರುವ ಚನ್ನಪಟ್ಟಣ ಶಾಖೆಯ ಕೆನರಾ ಬ್ಯಾಂಕ್‌ಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕಿನವರು "**ಸಾಕಷ್ಟು ಹಣ ಇಲ್ಲ**" ಎಂಬ ಹಿಂಬರಹದೊಂದಿಗೆ ಸದರಿ ಚೆಕ್ ನ್ನು ದಿಃ **04.01.2023** ರಂದು ಚೆಕ್‌ನ್ನು ವಾಪಸ್ಸು ನೀಡಿರುತ್ತಾರೆ. ಸದರಿ ಚೆಕ್ ತಿರಸ್ಕೃತಗೊಂಡ ಬಗ್ಗೆ ಆರೋಪಿಗೆ ತಿಳಿಸಿದಾಗ ಆರೋಪಿಯು ಕಾಲಾವಕಾಶವನ್ನು ಕೇಳಿದ್ದು ಎರಡನೇ ಬಾರಿ ದಿನಾಂಕಃ**17.02.2023** ರಂದು ಸದರಿ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿ ಹಣ ತೆಗೆದುಕೊಳ್ಳುವಂತೆ ಹೇಳಿರುತ್ತೀರಿ. ಅದರಂತೆ ಪಿರ್ಯಾದುದಾರರು ದಿನಾಂಕಃ**17.02.2023** ರಂದು ಸದರಿ ಚೆಕ್ಕನ್ನು ಪಿರ್ಯಾದಿದಾರರ ಖಾತೆ ಹೊಂದಿರುವ ಚನ್ನಪಟ್ಟಣ ಶಾಖೆಯ ಕೆನರಾ ಬ್ಯಾಂಕ್ ಗೆ ಹಾಜರುಪಡಿಸಿದ್ದು, ಸದರಿ ಚೆಕ್ಕು "**Drawers signature differs**" ಎಂಬ ಹಿಂಬರಹದೊಂದಿಗೆ ದಿನಾಂಕಃ**18.02.2023** ರಂದು ಬ್ಯಾಂಕಿನಿಂದ ವಾಪಸ್ಸಾಗಿರುತ್ತದೆ. ಆದ್ದರಿಂದ ಪಿರ್ಯಾದುದಾರರು ಆರೋಪಿಗೆ ದಿಃ **02.03.2023** ರಂದು ನೋಂದಾಯಿತ ಅಂಚೆ ಮೂಲಕ ಲೀಗಲ್ ನೋಟೀಸ್ ನೀಡಿ ಸಾಲದ ಹಣವನ್ನು **15** ದಿವಸಗಳ ಒಳಗಾಗಿ ಮರುಪಾವತಿ ಮಾಡುವಂತೆ ತಿಳಿಸಿರುತ್ತಾರೆ. ಆರೋಪಿಯು ನೋಟೀಸ್ ಜಾರಿಯಾಗಿದ್ದರೂ ಕೂಡ ಆರೋಪಿಯು ಪಿರ್ಯಾದುದಾರಗಿಗೆ ಸದರಿ ಅಡ್ವನ್ಸ್ ಹಣವನ್ನು ಮರುಪಾವತಿ ಮಾಡದೆ ಸುಳ್ಳನ್ನು ಹೇಳಿ ಅಸಮಂಜಸ ಪ್ರತ್ಯುತ್ತರವನ್ನು ನೀಡಿರುತ್ತೀರಿ. ಆರೋಪಿಯು ಪಡೆದ ರೂ.**50,000/-** ಹಣವನ್ನು ಪಡೆದಿರುವುದಕ್ಕೆ ಸಂಬಂಧಿಸಿದಕ್ಕೆ ಆರೋಪಿಯ ಪತ್ನಿಯವರೇ ಅವರ ಹಸ್ತಾಕ್ಷರದಲ್ಲೇ

ಷರಾವನ್ನು ಬರೆದು ಅದಕ್ಕೆ ಆರೋಪಿಯವರೇ ಸಹಿಯನ್ನು ಮಾಡಿದ್ದರೂ ಸಹ ಪಿರ್ಯಾದುದಾರರಿಗೆ ಮೋಸ ಮಾಡುವ ದುರುದ್ದೇಶದಿಂದ ಹಣವನ್ನು ಕೊಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳುಗಳಿಂದ ಕೂಡಿದ ಪತ್ಯುತ್ತರವನ್ನು ನೀಡಿರುತ್ತಾರೆ ಹಾಗೂ ಚೆಕ್ಕಿನ ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದಕಾರಣ ನೀವು ಕಲಂ.**138** ಎನ್.ಐ.ಆಕ್ಟ್ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

**1.** ಸದರಿ ಆಪಾದನೆ ಓದಿ ಹೇಳಿದ್ದು ಅರ್ಥವಾಯಿತೆ **?**

ಉತ್ತರ ಃ

**2.** ನಿಮ್ಮ ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ **?**

ಉತ್ತರ ಃ

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಓದಿ ಹೇಳಲಾಗಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು ಮತ್ತು ಈ ಒಂದು ಆಪಾದನೆ ಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತನು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕಃ **15.07.2023.**

ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ. ಚನ್ನಪಟ್ಟಣ.